ಕಡೆ ನಡೆಯುತ್ತಿವೆ. ಈ ರೀತಿ ಎಲ್ಲಾ ಹಂತಗಳಲ್ಲೂ ಗ್ರಂಥಾಲಯಗಳು ಇವೆ. ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಬೇರೆ ಬೇರೆ ಸೌಕರ್ಯಗಳ ಮುಖಾಂತರವಾಗಿ, ಜಿಲ್ಲಾಪರಿಷತ್ತಿನ ಮುಖಾಂತರವಾಗಿ, ಆವರೂ ಕೂಡಾ ಕಟ್ಟಡಗಳನ್ನು ಒದಗಿಸುವುದರಿಂದ ಅಲ್ಲಿ ಕೂಡಾ ಪ್ರಾರಂಭ ಮಾಡುವುದಕ್ಕೆ ಆಗುತ್ತದೆ. ಗ್ರಂಥಾಲಯ ಕಟ್ಟಡಗಳಿಗೋಸ್ಕರವಾಗಿ ನಾವು ೩ ಲಕ್ಷ ರೂಪಾಯಿಗಳನ್ನು ವಾರ್ಷಿಕವಾಗಿ ತೆಗೆದಿಟ್ಟಿದ್ದೇವೆ. ಇದರಿಂದ ವರ್ಷದಲ್ಲಿ ಸರ್ಕಾರ ೨ ಗ್ರಂಥಾಲಯಗಳ ಕಟ್ಟಡಗಳನ್ನು ಕಟ್ಟಿಸಬಹುದು ಗ್ರಂಥಾಲಯಗಳ ಕಟ್ಟಡಗಳ ಬಗ್ಗೆ ಖಾಸಗಿಯವರು, ಜಿಲ್ಲಾಪರಿಷತ್ತು ಮತ್ತು ಬೇರೆ ಮಾಧ್ಯಮಗಳ ಮುಖಾಂತರವಾಗಿ ಸಾಕಷ್ಟು ವ್ಯವಸ್ಥೆ ಮಾಡಲಾಗಿದೆ.

ಶ್ರೀಮತಿ ಸುಮಾ ವಸಂತ.— ಗ್ರಂಥಾಲಯದಲ್ಲಿ ಪ್ರತಿ ವರ್ಷವೂ ಎಷ್ಟು ಪುಸ್ತಕಗಳನ್ನು ಖರೀದಿ ಮಾಡುತ್ತಿದ್ದಾರೆ. ಈ ರೀತಿಯ ಪುಸ್ತಕಗಳನ್ನು ಖರೀದಿ ಮಾಡಲು ಎಷ್ಟು ಹಣವನ್ನು ಖರ್ಚು ಮಾಡಲಾಗುತ್ತಿದೆ ?

ಶ್ರೀ ಎಂ. ಚಂದ್ರಶೇಖರ್.— ಆ ಮಾಹಿತಿ ಸಧ್ಯದಲ್ಲಿ ನನ್ನಲ್ಲಿಲ್ಲ. ನಂತರ ಮಾನ್ಯ ಸದಸ್ಯರಿಗೆ ಆ ವಿವರಗಳನ್ನು ಒದಗಿಸಿಕೊಡುತ್ತೇನೆ.

ಶ್ರೀಮತಿ ಸುಮಾ ವಸಂತ.—ವಾರಪತ್ರಿಕೆ ಮತ್ತು ದಿನ ಪತ್ರಿಕೆಗಳನ್ನು ಖರೀದಿ ಮಾಡುವುದಕ್ಕಾಗಿ ಹಿಂದೆ ೭೦೦ ರೂಪಾಯಿಗಳನ್ನು ಮಂಜೂರು ಮಾಡುತ್ತಿದ್ದರು. ಆದರೆ ಈಗ ಅದನ್ನು ೩೬೦ ರೂಪಾಯಿಗಳಿಗೆ ಇಳಿಸಿದ್ದಾರೆ. ಇದಕ್ಕೆ ಕಾರಣವೇನು ? ಈ ರೀತಿ ಮಾಡಿರುವುದರಿಂದ ಗ್ರಂಥಾಲಯಗಳಲ್ಲಿ ಯಾವುದೇ ದಿನ ಪತ್ರಿಕೆ ಹಾಗೂ ವಾರಪತ್ರಿಕೆಗಳನ್ನು ಖರೀದಿ ಮಾಡಿಲ್ಲ. ಈ ಬಗ್ಗೆ ಸಚಿವರು ಏನು ಹೇಳುತ್ತಾರೆ ?

ಶ್ರೀ ಎಂ. ಚಂದ್ರಶೇಖರ್.—ಹಣದ ಕೊರತೆಯಿಂದ ಆ ರೀತಿಯ ನಿರ್ದೇಶನ ಹೊರಗಿರಬಹುದು ಆದರೆ ಎಲ್ಲೆಲ್ಲಿ ದಿನ ಪತ್ರಿಕೆಗಳು ಹಾಗೂ ವಾರ ಪತ್ರಿಕೆಗಳನ್ನು ಕೊಡಿಸುವುದಕ್ಕೆ ಸಾಧ್ಯವೊ ಅಲ್ಲಲ್ಲಿ ಕೊಡಿಸುವುದಕ್ಕೆ ಪ್ರಯತ್ನ ಮಾಡೋಣ.

ಅಧ್ಯಕ್ಷರು.—ನಿಮ್ಮ ಪ್ರಶ್ನೆ ನಂ.೧೭೪(೬೭೫) ಉತ್ತರಿಸುವುದಕ್ಕೆ ಸರ್ಕಾರದವರು ಸ್ವಲ್ಪ ಸಮಯವನ್ನು ಕೇಳಿದ್ದಾರೆ ,ಆದಕ್ಕಾಗಿ ಈ ಪ್ರಶ್ನೆಯನ್ನು ಮುಂದೂಡಿದ್ದೇನೆ.

ಶ್ರೀ ಬಿ. ರಾಚಯ್ಯ.—ನಂ.೧೭೫(೫೫೪)ಗೆ ಉತ್ತರ ಇನ್ನೂ ಬಂದಿಲ್ಲ. ಕೊನೆಯಲ್ಲಿ ತೆಗೆದುಕೊಳ್ಳಿ.

ಅಧ್ಯಕ್ಷರು.—ಆಗಬಹುದು. ೧೭೭(೬೭೬) (ಮಾನ್ಯ ಸದಸ್ಯರು ಗೈರು ಹಾಜರಾಗಿದ್ದಾರೆ).

ಪಿ. ಯು. ಸಿ. ಇಂಗ್ಲೀಷ್ ಪಠ್ಯ ಪುಸ್ತಕದ ಬದಲಾವಣೆ

೧೭೮(೭೧೫) ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ೧೯೮೭–೮೮ರ ಪರೀಕ್ಷೆಗಳಲ್ಲಿ ಪಿಯುಸಿ ೨ನೇ ವರ್ಷದ ಇಂಗ್ಲೀಷ್‌ನಲ್ಲಿ ರಾಜ್ಯಮಟ್ಟದ ಫಲಿತಾಂಶವೇನು ?

ಆ) ಸದ್ರಿ ಇಂಗ್ಲೀಷ್ ಪುಸ್ತಕವನ್ನು ಬದಲಿ ಮಾಡುವಂತೆ ಶಿಕ್ಷಕರು ಪೋಷಕರು ಹಾಗೂ ವಿದ್ಯಾರ್ಥಿಗಳು ಒತ್ತಾಯಿಸುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ ?

ಇ) ಹಾಗಿದ್ದಲ್ಲಿ ಪುಸ್ತಕವನ್ನು ಬದಲಾಯಿಸಲಾಗುವುದೇ ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ೧೯೮೮ ಏಪ್ರಿಲ್ ಪರೀಕ್ಷೆ	ಉತ್ತೀರ್ಣರಾದ ವಿದ್ಯಾರ್ಥಿಗಳ	ಶೇಕಡ
ಹಾಜರಾದ ವಿದ್ಯಾರ್ಥಿಗಳ	ಸಂಖ್ಯೆ ೬೯,೨೦೫	ಫಲಿತಾಂಶ
ಸಂಖ್ಯೆ ೧,೮೨,೫೮೩		೩೭.೯
೧೯೮೮ರ ಸೆಪ್ಟೆಂಬರ್ ಪರೀಕ್ಷೆಗೆ	ಉತ್ತೀರ್ಣರಾವಿದ್ಯಾರ್ಥಿಗಳ	ಶೇಕಡ

ಹಾಜರಾದ ವಿದ್ಯಾರ್ಥಿಗಳ ಸಂಖ್ಯೆ	ಸಂಖ್ಯೆ	ಫಲಿತಾಂಶ
೯೭,೦೩೬	೩೪,೩೨೨	೩೦.೫೩

ಆ) ಗಮನಿಸಿದೆ.

ಇ) ಇಲ್ಲ.

ಶ್ರೀ ಯು. ಭೂಪತಿ.— ಎರಡನೇ ವರ್ಷದ ಪಿ. ಯು. ಸಿ. ಯ ಇಂಗ್ಲೀಷ್ ಪಠ್ಯ ಪುಸ್ತಕದ ಬಗ್ಗೆ ಕಳೆದ ಎರಡೂವರೆ ವರ್ಷಗಳಿಂದ ದೊಡ್ಡ ವಿವಾದವೇ ಎದ್ದಿದೆ. ಇಂಗ್ಲೀಷ್ ವಿಷಯದಲ್ಲಿ ಬೋಧನೆ ಮಾಡತಕ್ಕ ಅಧ್ಯಾಪಕವರ್ಗದಲ್ಲಿ ಶೇಕಡ ೯೦ ರಷ್ಟು ಅಧ್ಯಾಪಕರು ಸರ್ಕಾರಕ್ಕೆ ಮತ್ತು ಪಿ.ಯು.ಸಿ. ಬೋರ್ಡಿಗೆ ಅನೇಕ ಸಾರಿ ಈ ಪುಸ್ತಕವನ್ನು ಬದಲಾವಣೆ ಮಾಡಬೇಕೆಂದು ಮಾಡಿದ್ದಾರೆ. ನಮ್ಮ ರಾಜ್ಯದ ವಿದ್ಯಾರ್ಥಿಗಳಿಗೆ ಈ ಪುಸ್ತಕದಿಂದ ಏನನ್ನೂ ನಾವು ಕಲಿಸ ಬುದಕ್ಕೆ ಸಾಧ್ಯವಿಲ್ಲ ಎಂಬುದಾಗಿ ಬಹಳಷ್ಟು ಜನ ಹೇಳಿದ್ದಾರೆ. ಆದರೆ ಮಂತ್ರಿಗಳು ಕೊಟ್ಟಿರತಕ್ಕ ಅಂಕಿ ಅಂಶಗಳ ಪ್ರಕಾರ ಶೇಕಡ ಫಲಿತಾಂಶ ೩೭.೯ ಎಂಬುದಾಗಿ ಹೇಳಿದ್ದಾರೆ. ನಾನು ನನ್ನ ಪ್ರಶ್ನೆಯಲ್ಲಿ ೧೯೮೭ ಹಾಗೂ ೧೯೮೮ರ ಎರಡೂ ವರ್ಷಗಳ ಮಾಹಿತಿಯನ್ನೂ ಕೇಳಿದ್ದೆ. ಆದರೆ ೧೯೮೮ನೇ ವರ್ಷದ ಮಾಹಿತಿಯನ್ನು ಮಾತ್ರ ಕೊಟ್ಟಿದ್ದಾರೆ. ೩೭.೯ ಪರ್ಸೆಂಟ್ ಫಲಿತಾಂಶ ಏಕೆ ಬಂತು ಅಂದರೆ it is not on actual valuation. ವ್ಯಾಲ್ಯುಯೇಷನ್ ಆದ ನಂತರ ವರ್ಸೆಂಟೇಜ್ ಬಹಳ ಕಡಿಮೆ ಯಾಗಿರುವುದನ್ನು ಕಂಡು you have given grace marks from 10 to 25%. Then only the annual examination percentage has increased. ಹೀಗಿರುವಾಗ ಈ ಪುಸ್ತಕವನ್ನು ಬದಲಾವಣೆ ಮಾಡಬೇಕೆಂದು ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲೀಷ್ ಪ್ರೊ ಫೆಸರ್ಸ್ ಹಾಗೂ ರೀಡರ್ಸ್ ಅಸೋಷಿಯೇಷನ್‌ನವರು ಮನವಿ ಮಾಡಿದ್ದಾರೆ. ಆ ಬಗ್ಗೆ ಪತ್ರಿಕೆಗಳಲ್ಲಿ ಆರ್ಟಿಕಲ್ ಕೂಡಾ ಬಂದಿದೆ. ಕಳಂಕ್ ರಾಮಮೂರ್ತಿಯವರೂ ಕೂಡಾ ಆ ಬಗ್ಗೆ ಪತ್ರಿಕೆಯಲ್ಲಿ ಆರ್ಟಿಕಲ್ ಬರೆದಿದ್ದಾರೆ. ಇಷ್ಟೆಲ್ಲಾ ಇರಬೇಕಾದರೆ ಸರ್ಕಾರದವರು ನಮ್ಮ ಗಮನಕ್ಕೆ ಬಂದಿದೆ ಎಂದು ಹೇಳುತ್ತಾರೆ. ಈ ಪುಸ್ತಕ ಏನು ಇದೆ ಇದರಿಂದ ಆಕ್ಸ್‌ಫರ್ಡ್ ಯೂನಿವರ್ಸಿಟಿ ಮಟ್ಟದಲ್ಲಿರುವವರಿಗೆ ಪಾಠವನ್ನು ಹೇಳಬಹುದೇ ಹೊರತು ಕರ್ನಾಟಕದ ವಿದ್ಯಾರ್ಥಿಗಳಿಗಂತೂ ಸಾಧ್ಯವಿಲ್ಲ. ಇದು ಸರ್ಕಾರದ ಗಮನಕ್ಕೆ ಬಂದಿದ್ದರೂ ಈ ಪುಸ್ತಕವನ್ನು ಬದಲಿ ಮಾಡುವುದಿಲ್ಲವೆಂದು ಹೇಳಿರ ಬೇಕಾದರೆ ಸರ್ಕಾರದ ಉದ್ದೇಶವೇನೆಂಬುದನ್ನು ಹೇಳಬೇಕು ?

ಶ್ರೀ ಎಂ. ಚಂದ್ರಶೇಖರ್.— ಪಠ್ಯಪುಸ್ತಕಗಳನ್ನು ಮಾಡುವಾಗ, ಆ ಭಾಷೆಯಲ್ಲಿ ಪಾಠ ಮಾಡುವ ಎಲ್ಲಾ ಪ್ರಾಧ್ಯಾಪಕರ, ಪ್ರೊಫೆಸರ್‌ಗಳ ಜೊತೆ ಸಮಾಲೋಚನೆ ಮಾಡುವುದರ ಜೊತೆಗೆ ಮೈಸೂರಿನಲ್ಲಿರುವ ಭಾರತೀಯ ಭಾಷಾ ಸಂಸ್ಥೆ ಇವರೂ ಪಠ್ಯ ಪುಸ್ತಕಗಳನ್ನು ನಿರ್ಮಾಣ ಮಾಡುವುದಕ್ಕೆ ಸಹಕಾರಿಯಾಗಿದ್ದಾರೆ. ಇವರೆಲ್ಲರನ್ನೂ ಕೇಳಿಯೇ ಈ ಪಠ್ಯ ಪುಸ್ತಕ ರಚನೆಯಾಗಿರುವುದು ಆದರೆ ಈಗ ಇಲಾಖೆಯ ವರದಿ ಪ್ರಕಾರ ಅಲ್ಲಿ ಪ್ರಶ್ನೆಗಳನ್ನು ಕೇಳುವುದರಲ್ಲಿ ಬೇರೆ ತರಹ ಮಾಡ ಬೇಕೆಂದು ಒಂದು ಕಂಪ್ಲೇಂಟ್ ಬಂದಿದೆ. ಯಾವರೀತಿ ಎಂದರೆ, ಪಠ್ಯಕ್ಕೆ ಸಂಬಂಧಪಟ್ಟಂತೆ ಇಂತಿಷ್ಟು ಪ್ರಾಕರ್ಯಗಳು ಮತ್ತು ಪಠ್ಯೇತರ ಅಂದರೆ ಬೇರೆ ಇತರ ವಿಚಾರಗಳಿಗೆ ಸಂಬಂಧಪಟ್ಟಂತೆ ಇಂತಿಷ್ಟು ಪ್ರಾಕರ್ಯಗಳು ಎಂದು ಪ್ರಶ್ನೆಪತ್ರಿಕೆಯಲ್ಲಿ ಇದೆ. ಪಠ್ಯ ಪುಸ್ತಕಕ್ಕೆ ಸಂಬಂಧಪಟ್ಟಂತೆ ೪೮ ಅಂಕಗಳು ಮತ್ತು ಪಠ್ಯೇತರಕ್ಕೆ ಸಂಬಂಧಪಟ್ಟಂತೆ ೫೨ ಅಂಕಗಳು ಎಂದು ಇದೆ. ಇದು ಸರಿಯಲ್ಲ. ಪಠ್ಯಕ್ಕಿಂತ ಪಠ್ಯೇತರಕ್ಕೆ ಜಾಸ್ತಿ ಅಂಕಗಳಿವೆ. ಆದ್ದರಿಂದ ಪಠ್ಯಪುಸ್ತಕಕ್ಕೆ ಸಂಬಂಧಪಟ್ಟಂತೆ ಇರುವ ಅಂಕಗಳು ಹೆಚ್ಚು ಆಗಬೇಕೆಂಬ ವಿಚಾರಗಳು ಇಲಾಖೆಗೆ ಬಂದಮೇಲೆ ಈಗ ಈ ವರ್ಷದ ಪರೀಕ್ಷೆಗೆ ಪಠ್ಯಪುಸ್ತಕಕ್ಕೆ ಸಂಬಂಧಪಟ್ಟಂತೆ ಶೇಕಡಾ ೬೬ ಅಂಕಗಳ ಪ್ರಶ್ನೆ ಪತ್ರಿಕೆಯ ವಿಷಯಗಳಿಗೆ ಸಂಬಂಧಪಟ್ಟಂತೆ ಶೇಕಡಾ ೩೪ ಅಂಕಗಳು ಇರಬೇಕೆಂದು ಪರಿವರ್ತನೆ ಮಾಡಿದ್ದೇವೆ. ಈ ರೀತಿ ಪ್ರಶ್ನೆಗಳ ಬಗ್ಗೆ ಮಾತ್ರ ಇಲಾಖೆಗೆ ಕಂಪ್ಲೈಂಟ್ ಬಂದಿದೆ. ಆದರೆ ಸಂಬಂಧಪಟ್ಟಂಥ ಪಠ್ಯಪುಸ್ತಕದ ಬಗ್ಗೆ ಏನು ಕಂಪ್ಲೈಂಟ್ ಇದೆ. ಅದು ನನ್ನ ಗಮನಕ್ಕೆ ಬಂದಿಲ್ಲ, ಇಲಾಖೆಯಲ್ಲೂ ಈ ಬಗ್ಗೆ ಮಾಹಿತಿ ಇಲ್ಲವೆಂದು ಹೇಳಿದ್ದಾರೆ. ಒಂದು ವೇಳೆ ಹಾಗೇನಾದರೂ ಇದ್ದರೆ ನಾನು ತರಿಸಿ ಆ ಬಗ್ಗೆ ಕೂಡ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಯು. ಭೂಪತಿ.—ಈ ಬಗ್ಗೆ ಇಲಾಖೆಗೆ ಮಾಹಿತಿ ಬಂದಿಲ್ಲವೆಂದು ಹೇಳುವುದು ತಪ್ಪು. ತಾವು ದಯವಿಟ್ಟು ಇನ್ನೊಂದು ಸಲ ಇಲಾಖೆಯ ಜೊತೆಯಲ್ಲಿ ಸಮಾಲೋಚನೆ ಮಾಡಿ. The Government has already formed a Committee to examine these questions. ಈ ಕಮಿಟಿಯಲ್ಲಿ ಶ್ರೀ ಯು. ಆರ್. ಅನಂತಮೂರ್ತಿಯವರೂ ಇದ್ದಾರೆ. ಮೂರು

ಜನರ ಎಕ್ಸ್‌ಪರ್ಟ್ಸ್ ಕಮಿಟಿ ಮಾಡಿ ಅವರು ಒಂದು ರಿಪೋರ್ಟನ್ನು ಕೊಟ್ಟಿದ್ದಾರೆ. ಆ ಕಮಿಟಿಯವರು ರಿಪೋರ್ಟ್ ಕೊಡಬೇಕಾದರೆ, ಯಾರನ್ನೂ ಕರೆದು ಅವರು ಕನ್ಸಲ್ಟ್ ಮಾಡಿದರು ? Whether they have invited any lecturers or professors of English who are actually teaching English in the colleges. ಇವರು ಅವರನ್ನೇನೂ ಕರೆಯಲಿಲ್ಲ. ಇವರು ಮೂರು ಜನರಿಗೆ ಟಿಕ್ಕಿಟ್ಟು ಬುಕ್ ಹಿಡಿದುಕೊಂಡು ನಂದಿಬೆಟ್ಟದಲ್ಲಿ ಕುಳಿತು ಕೊಂಡು ಎನ್‌ಕ್ವೈರಿ ಮಾಡಿ ಎಂದು ಹೇಳಿದರೆ ಹೇಗೆ ? The Board has accepted it. It is wrong. ಕಳೆದ ವರ್ಷದ ಪ್ರಶ್ನೆ ಪತ್ರಿಕೆಯನ್ನು ನಾನು ತಂದುಕೊಡುತ್ತೇನೆ. ಮಾನ್ಯ ಅಧ್ಯಕ್ಷರೇ, ತಮ್ಮ ಗಮನಕ್ಕೆ ತರುವುದಾದರೆ, ಮಾನ್ಯ ಮಂತ್ರಿಗಳು ಶೇಕಡಾ ೫೨ ಅಂಕಗಳನ್ನು ಗ್ರಾಮರ್‌ಗೋಸ್ಕರ ಮೀಸಲು ಇಟ್ಟಿದ್ದಾರೆ. ಅದರಲ್ಲಿ ೩೦ಕ್ಕೂ ಹೆಚ್ಚು ತಪ್ಪುಗಳಿವೆ. There are more than 30 grammatical mistakes. ೩೦ಕ್ಕಿಂತ ಹೆಚ್ಚು ಗ್ರಾಮರ್ ಮಿಸ್ಟೇಕ್ಸ್ ಇರುವಂಥ ಪ್ರಶ್ನೆಪತ್ರಿಕೆಯನ್ನು ವಿದ್ಯಾರ್ಥಿಗಳಿಗೆ ಕೊಟ್ಟು you have spplied the life of nearly 3 lakh students. Who is responsible for this ? Whether the Government is prepared to take action against such people ? ದಯವಿಟ್ಟು ಹೇಳಿ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ನಾನು ಆಗಲೇ ಹೇಳಿದಹಾಗೆ, ಪ್ರಶ್ನೆಪತ್ರಿಕೆ ಬಗ್ಗೆ ಒಂದು ದೂರು ಬಂದಿರುವುದನ್ನು ಅವರು ಕೂಡ ಹೇಳುತ್ತಿದ್ದಾರೆ. ಪಠ್ಯ ಪುಸ್ತಕ ಬಗ್ಗೆ ಅಷ್ಟು ಇಲ್ಲ. ಆದರೆ ಪ್ರಶ್ನೆಗಳನ್ನು ಹಾಕಿರುವಂಥ ರೀತಿಯಲ್ಲಿ ಶೇಕಡಾವಾರು ಏನು ಇತ್ತು, ಅದನ್ನು ಬದಲಾವಣೆ ಮಾಡಬೇಕೆಂದು ಬಂದಿರುವುದರ ಬಗ್ಗೆ ಈಗ ಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದೇನೆ. ಯಾವುದೋ ಒಂದು ವರ್ಷದ ಪ್ರಶ್ನೆಪತ್ರಿಕೆಯಲ್ಲಿ ವಿಪರೀತ ತಪ್ಪುಗಳಿವೆ ಎಂದು ಹೇಳಿದ್ದಾರೆ. ಅದನ್ನು ನನ್ನ ಗಮನಕ್ಕೆ ತಂದಲ್ಲಿ ನಾನು ವಿಚಾರ ಮಾಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ನಮಗೆ ಬೇರೆ ಏನೂ ಕೆಲಸ ಇಲ್ಲವೇನು ? ೧೦ ಗಂಟೆಗೆ ಚರ್ಚೆ ಪ್ರಾರಂಭವಾಗಬೇಕು.

ಶ್ರೀ ಯು. ಭೂಪತಿ.—ಕರ್ನಾಟಕ ರಾಜ್ಯದ ಇಂಗ್ಲೀಷ್ ಅಧ್ಯಾಪಕರಲ್ಲಿ ಶೇಕಡಾ ೯೫ ರಷ್ಟು ಜನ ಈ ಪಠ್ಯಪುಸ್ತಕವನ್ನು ಬದಲಾವಣೆ ಮಾಡಬೇಕು ಎಂದು ಸಹಿ ಮಾಡಿ ಕೊಟ್ಟಿದ್ದಾರೆ. ಆದಕಾರಣ ಇದನ್ನು ಪರಿಶೀಲಿಸಿ ಈ ಪಠ್ಯ ಪುಸ್ತಕವನ್ನು ಬದಲಾವಣೆ ಮಾಡತಕ್ಕಂಥ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ಈಗ ಈ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದೀರಿ. ಇದನ್ನು ವಿಚಾರ ಮಾಡಿ ಹೇಳುತ್ತೇನೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ನನ್ನ ಪ್ರಶ್ನೆ ೧೭೯ (೪೪೦)ಕ್ಕೆ ಉತ್ತರ ಬಂದಿಲ್ಲ.

ಅಧ್ಯಕ್ಷರು.—ತಮ್ಮ ಇಲಾಖೆಯಿಂದ ಉತ್ತರ ಬಂದಿದೆಯೋ ?

ಶ್ರೀ ಎಂ. ಚಂದ್ರಶೇಖರ್.—ಬಂದಿದೆ.

ಅಧ್ಯಕ್ಷರು.—ಮತ್ತೆ ಅವರಿಗೇಕೆ ಉತ್ತರದ ಪ್ರತಿಯನ್ನು ಕೊಟ್ಟಿಲ್ಲ ? ನಿಮ್ಮ ಆಫೀಸರ್ಸ್‌ಗೆ ಹೇಳಿ. You must have control over your officers. ಇದನ್ನೇ ನಾನು ಹೇಳಬೇಕಾಯ್ತಲ್ಲ ? ಇಲ್ಲಿ ೨೨೪ ಉತ್ತರದ ಪ್ರತಿಗಳು ಬರಬೇಕು ಎಂದು ನೂರಾರು ಸಲ ನಾನು ಹೇಳಿದ್ದೇನೆ.

ಶ್ರೀ ಎಂ. ಚಂದ್ರಶೇಖರ್. – ಕಾಪಿಯನ್ನು ಈಗ ಕಳಿಸಿಕೊಡುತ್ತೇನೆ.

MR. SPEAKER.—You must take action against them for dereliction of duty.